www.ecourtsindia.com



**ಪಿ.ಡಬ್ಲ್ಯೂಃ 1**

ದಿನಾಂಕಃ 05.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲು ಪ್ರತಿವಾದಿ ನಂಬರ್ 1 ಮತ್ತು 2 ರವರ ಪರ ವಕೀಲರಿಂದ**

ನಾನು ವ್ಯವಸಾಯ ಮಾಡುತ್ತೇನೆ. ನಾವು ಈಗ ಕುಟುಂಬ ಸಮೇತ ಸಿರುಗುಪ್ಪದಲ್ಲಿ ವಾಸವಾಗಿದ್ದೇವೆ ಎಂದರೆ ಸರಿ. ದಾವೆಯ ಸಲ್ಲಿಸುವ ನಾನೆ ಮಾಹಿತಿಯನ್ನು ಕೊಟ್ಟಿರುತ್ತೇನೆ. ದಾವಾ ಆಸ್ತಿಯ ಸರ್ವೆ ನಂಬರ್ 261/3 ಇರುತ್ತದೆ. ಇದಕ್ಕಿಂತ ಮೊದಲೂ ಸದರಿ ಜಮೀನಿನ ಸರ್ವೆ ನಂಬರ್ 261/ಬಿ/2 ಅಂತ ಇತ್ತು. ಸದರಿ ಸರ್ವೆ ನಂಬರ್ 261/ಬಿ/2 ರ ಒಟ್ಟು ವಿಸ್ತೀರ್ಣ 4.88 ಎಕರೆ ಇರುತ್ತದೆ. ದಾವಾ ಆಸ್ತಿಯ ವಿಸ್ತೀರ್ಣ 2.44 ಎಕರೆ ಇರುತ್ತದೆ. ಸರ್ವೆ ನಂಬರ್ 261/ಬಿ/2 ಸುತ್ತ ಮುತ್ತ ಸರ್ಕಾರಿ ಜಮೀನು ಇರುವ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 261 ರ ಸಂಪೂರ್ಣ ವಿಸ್ತೀರ್ಣ 23.75 ಎಕರೆ ಇರುತ್ತದೆ. ಅದರ ಸುತ್ತ ಮುತ್ತ ಯಾರ ಜಮೀನು ಇರುತ್ತದೆ ಎಂದು ನನಗೆ ಗೊತ್ತಿಲ್ಲ.

1994 ಕ್ಕಿಂತ ಪೂರ್ವದಲ್ಲಿ ದಾವಾ ಆಸ್ತಿಯನ್ನು ನಾವು ಉಳುಮೆ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರು ಪಡಿಸಿಲ್ಲ. ನಾನು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಚೆಕ್ಕು ಬಂದಿ ಹೇಳಲು ಆಗುತ್ತದೆ. ಸಿದ್ದಪ್ಪ ಮತ್ತು ಕೃಷ್ಣಪ್ಪ ರವರ ಜಮೀನಿನ ದಕ್ಷಿಣಕ್ಕೆ ದಾವಾ ಜಮೀನು ಇರುತ್ತದೆ. ಮಾರೆಮ್ಮ ರವರ ಜಮೀನಿನ ಪಶ್ಚಿಮಕ್ಕೆ ದಾವಾ ಜಮೀನು ಇರುತ್ತದೆ. ಮರಿಯಪ್ಪ, ದೊಡ್ಡಸಿದ್ದಪ್ಪ, ಮಹಾಂಕಳಮ್ಮ, ದ್ಯಾವಮ್ಮ ಮತ್ತು ಗುರುಸಿದ್ದಪ್ಪ ರವರ ಜಮೀನಿನ ಉತ್ತರ ದಿಕ್ಕಿಗೆ ದಾವಾ ಜಮೀನು ಇರುತ್ತದೆ.

ದಾವಾ ಜಮೀನಿನ ಚೆಕ್ಕು ಬಂದಿಯಲ್ಲಿ ಪೂರ್ವ ದಿಕ್ಕಿನಲ್ಲಿ ರಸ್ತೆ ಮತ್ತು ಸರ್ವೆ ನಂಬರ್ 153 ರೂದ್ರ ಭೂಮಿ ಇರುತ್ತದೆ ಎಂದು ಬರೆಸಿರುತ್ತೇನೆ. ಸದರಿ ಸರ್ವೆ ನಂಬರ್ 153 ರ ಪಶ್ಚಿಮಕ್ಕೆ ನಮ್ಮ ಜಮೀನು ಇರುತ್ತದೆ. ನಾನು ದಾವಾ ಆಸ್ತಿಯ ಸ್ವಾಧೀನದಲ್ಲಿ ಇಲ್ಲದ ಕಾರಣ ದಾವಾ ಆಸ್ತಿ ಎಲ್ಲಿದೆ ಎಂದು ನಿಖರವಾಗಿ ಹೇಳಲು ಆಗುತ್ತಿಲ್ಲ ಎಂದರೆ ಸರಿಯಲ್ಲ.

ನಾನು 2022 ರಲ್ಲಿ ದಾವಾ ಜಮೀನನ್ನು ಅಳತೆ ಮಾಡಿಕೊಡಲು ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ದಾವಾ ಸಲ್ಲಿಸುವ ಮೊದಲೆ ಸದರಿ ಅರ್ಜಿ ಸಲ್ಲಿಸಿದ್ದೆ. ದಾವಾ ಸಲ್ಲಿಸುವ ಮೊದಲೆ ಸರ್ವೆ ಮಾಡಲು ಬಂದಿದ್ದರು. ಸದರಿ ಸರ್ವೆ ದಾಖಲೆ ನನ್ನ ಬಳಿ ಇವೆ. ದಿಃ 12-07-2022 ರಂದು ದಾವಾ ಜಮೀನನ್ನು ಅಳತೆ ಮಾಡಲು ಅಧಿಕಾರಿಗಳು ಬಂದಿದ್ದರು ಎಂದರೆ ಸರಿ. ಅದೇ ದಿನ ಸ್ಥಳದಲ್ಲಿ ಪ್ರತಿವಾದಿಗಳು ಹಾಗೂ ನನ್ನ ಸಮಕ್ಷಮ ಮಹಜರು ಮಾಡಿ ಮತ್ತು ಹೇಳಿಕೆಯನ್ನು

This is a True Copy of the Court Records Online. Authenticated @ districts.ecourtsindia.com/cnr/KABI700055262022/truecopy/order-2.pdf

www.ecourtsindia.com



ಪಡೆದರು ಎಂದರೆ ಸರಿ. ಆ ಸಮಯದಲ್ಲಿ ಪೊಲೀಸರು ಇದ್ದರು ಎಂದರೆ ಸರಿ. ಪೊಲೀಸರನ್ನು ಸುರಕ್ಷತೆ ಸಲುವಾಗಿ ನಾನೆ ಕರೆಸಿದ್ದೆ. ದಾವಾ ಜಮೀನನ್ನು ಅಳತೆ ಮಾಡಲು ಬಂದಾಗ ಅಲ್ಲಿ ಭತ್ತದ ಬೆಳೆ ಇತ್ತು ಎಂದರೆ ಸರಿ.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸುತ್ತಿದ್ದು ಸದರಿ ದಾಖಲೆಯಂತೆ ಸರ್ವೆ ಅಧಿಕಾರಿಗಳು ಮಹಜರು ಮಾಡಿ ಸರ್ಕಾರಕ್ಕೆ ಹೇಳಿಕೆ ಕೊಟ್ಟಿದ್ದಾರೆ ಎಂದರೆ ಸರಿ. ಸಾಕ್ಷಿಯು ಸದರಿ ದಾಖಲೆ ಹಾಗೂ ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಸರ್ಕಾರಕ್ಕೆ ನೀಡಿದ ಹೇಳಿಕೆಯನ್ನು ನಿಡಿಃ1 ಎಂದು, ಸಾಕ್ಷಿಯ ಸಹಿಯನ್ನು ನಿಡಿಃ1ಎ ಎಂದು ಗುರುತಿಸಲಾಯಿತು. ಸದರಿ ದಾಖಲೆಯ ಮೇಲೆ ಬರೆದ ವಿಷಯಗಳನ್ನು ನನಗೆ ಓದಿ ಹೇಳಿದ ನಂತರ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ಸದರಿ ದಾಖಲೆಯಲ್ಲಿರುವಂತೆ ಸಾಗುವಳಿದಾರನಾದ ನನಗೆ ಸಾಗುವಳಿ ಮಾಡಲು ಅವಕಾಶ ಕೊಡುತ್ತಿಲ್ಲ, ಆದ್ದರಿಂದ ಅದ್ದು ಬಸ್ತು ಮಾಡಿಕೊಳ್ಳಲು ನಾನು ಕೇಳಿಕೊಂಡಿದ್ದೆ ಎಂದರೆ ಸರಿ.

ಸರ್ವೆ ಅಧಿಕಾರಿಗಳು ಮಾಡಿದ ಮಹಜರು ದಾಖಲೆಗೆ ಪ್ರತಿವಾದಿಗಳು ಸಹಿಯನ್ನು ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಊರಿನವರು ಮತ್ತು ಪ್ರತಿವಾದಿಗಳು ಜಮೀನಿನಲ್ಲಿ ತಾವು ಭತ್ತ ನಾಟಿ ಮಾಡಿದ್ದೇವೆ ಅಳತೆ ಕಾರ್ಯ ಮಾಡಬೇಡಿ ಎಂದು ತಕರಾರು ಮಾಡಿದ್ದರು ಎಂದರೆ ಸರಿಯಲ್ಲ. ಆ ದಿನ ಜಮೀನಿನ ಅಳತೆ ಕಾರ್ಯ ಆಗಲಿಲ್ಲ ಎಂದರೆ ಸರಿ. ಯಾವ ಕಾರಣಕ್ಕೆ ಆಗಲಿಲ್ಲ ಎಂಬುದು ಗೊತ್ತಿಲ್ಲ. ನಿಡಿಃ 1 ರಲ್ಲಿ ಹೇಳಿರುವಂತೆ ಆ ದಿನ ಜಮೀನಿನಲ್ಲಿ ಭತ್ತದ ಬೆಳೆ ಇರುವುದರಿಂದ ಅಳತೆ ಮಾಡಲಾಗಿಲ್ಲ ಎಂದು ಬರೆಯಲಾಗಿದೆ ಎಂದರೆ ಸರಿ.

ನಾನು ನೀಡಿದ ಅರ್ಜಿಯಲ್ಲಿ ಪ್ರತಿವಾದಿಗಳು ಅನದೀಕೃತವಾಗಿ ದಾವಾ ಜಮೀನಿನ ಸ್ವಾಧೀನದಲ್ಲಿದ್ದು ನನಗೆ ಸಾಗುವಳಿ ಮಾಡಲು ಬಿಡುತ್ತಿಲ್ಲ ಎಂದು ಬರೆಸಿದೆ ಎಂದರೆ ಸರಿಯಲ್ಲ. ಸತ್ಯ ವಿಚಾರ ನ್ಯಾಯಾಲಯಕ್ಕೆ ಗೊತ್ತಾಗುತ್ತದೆ ಎಂಬ ಕಾರಣಕ್ಕೆ ಉದ್ದೇಶಪೂರ್ವಕವಾಗಿ ಸದರಿ ಅರ್ಜಿಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರನ್ನು ಕರೆದುಕೊಂಡು ದಾವಾ ಆಸ್ತಿಯ ಸ್ವಾಧೀನದಲ್ಲಿದ್ದ ಪ್ರತಿವಾದಿಯರನ್ನು ಹೊರಹಾಕಲು ಪ್ರಯತ್ನಪಟ್ಟಿದ್ದೇನು ಎಂದರೆ ಸರಿಯಲ್ಲ.

ಈ ದಾವೆಯನ್ನು ಸಲ್ಲಿಸಿದ ನಂತರ ಊರಿನ ಹಲವಾರು ಜನರು ತಾವು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿದ್ದು ತಮಗೆ ಸಾಗುವಳಿ ಚೀಟಿ ನೀಡಬೇಕೆಂದು ಮಾನ್ಯ ಜಿಲ್ಲಾಧಿಕಾರಿ ಬಳ್ಳಾರಿಯವರಿಗೆ ಅರ್ಜಿಯನ್ನು ನೀಡಿದ್ದೇವೆ ಎಂದರೆ ಸರಿಯಲ್ಲ. ಮಾನ್ಯ ಜಿಲ್ಲಾಧಿಕಾರಿಗಳು ದಿಃ10-08-2022 ರಂದು ಮಾನ್ಯ ತಹಶೀಲ್ದಾರ್ ಸಿರುಗುಪ್ಪ ರವರಿಗೆ ವರದಿ ಸಲ್ಲಿಸಲು ಆದೇಶ

This is a True Copy of the Court Records Online. Authenticated @ districts.ecourtsindia.com/cnr/KABI700055262022/truecopy/order-2.pdf

ಮಾಡಿದ್ದರು ಎಂದರೆ ಸರಿಯಲ್ಲ. ಮಾನ್ಯ ಜಿಲ್ಲಾಧಿಕಾರಿಯವರ ಆದೇಶದ ಪ್ರಕಾರ ತಹಶೀಲ್ದಾರು ಸಿರುಗುಪ್ಪ ಇವರು ಸ್ಥಳ ಪರಿಶೀಲನೆಗೆ ಕಂದಾಯ ನಿರೀಕ್ಷಕರು ಇವರಿಗೆ ಆದೇಶ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಕಂದಾಯ ನಿರೀಕ್ಷಕರು ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ದಿಃ31-01-2023 ರಂದು ಕಂದಾಯ ನಿರೀಕ್ಷಕರು ತೆಕ್ಕಲಕೋಟೆ ರವರು ಮಾನ್ಯ ತಹಶೀಲ್ದಾರ್ ಸಿರುಗುಪ್ಪ ರವರಿಗೆ ವರದಿಯನ್ನು ನೀಡಿದ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ಸದರಿ ದಾವಾ ಜಮೀನಿನಲ್ಲಿ ಮಾಹಾಂಕಾಳಮ್ಮ, ಕೆ. ಮರಿಯಪ್ಪ, ದ್ಯಾವಮ್ಮ, ದೊಡ್ಡ ಸಿದ್ದಮ್ಮ, ಸಣ್ಣ ಸಿದ್ದಮ ಮತ್ತು ಹರಿಜನ ಸಿದ್ದಪ್ಪ ರವರು 30 ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದರು ಎಂದು ವರದಿ ಮಾಡಿದ್ದರು ಎಂದರೆ ಸರಿಯಲ್ಲ. ಸ್ಥಳ ತನಿಖೆ ಮಾಡಿದ ನಂತರ ಪ್ರತಿವಾದಿ ಹಾಗೂ ಮೇಲೆ ತಿಳಿಸಿದ ಜನರು 50 ವರ್ಷಗಳಿಂದ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಎಂದು ತಿಳಿದು ಬಂತು ಎಂದು ವರದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಆ ದಿನ ಮಹಜರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ನಾನು ಸದರಿ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿಃ 36 ರ ಪ್ರಕಾರ ನಾನು ಅರ್ಜಿಯನ್ನು ಕೊಟ್ಟಿದ್ದೆ ಎಂದರೆ ಸರಿ. ಸದರಿ ಅರ್ಜಿ ನೀಡಿದ ನಂತರ ದಾವಾ ಆಸ್ತಿಯ ಸ್ಥಳ ಪರಿಶೀಲನೆ ಮಾಡಿ ಮಹಜರು ಮಾಡಿರುತ್ತಾರೆ. ಸದರಿ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿದ ಬಗ್ಗೆ ಗೊತ್ತಿಲ್ಲ. ನಾನು ಸದರಿ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿಃ36 ಅರ್ಜಿಯನ್ನು ನೀಡುವ ಮೊದಲು ದಾವಾ ಆಸ್ತಿಯಲ್ಲಿ ಯಾವುದೇ ಅಳತೆ ಕಾರ್ಯ ಆಗಿಲ್ಲ ಎಂದರೆ ಸರಿಯಲ್ಲ. ನಿಟ್ಟೂರಿನ ಗ್ರಾಮ ಲೆಕ್ಕಾಧಿಕಾರಿ ಮತ್ತು ತೆಕ್ಕಲಕೋಟೆಯ ಕಂದಾಯ ನಿರೀಕ್ಷಕರು ಸ್ಥಳ ಪರಿಶೀಲನೆಗೆ ಬಂದಿದ್ದರು. ಸದರಿ ವರದಿಯ ನಕಲು ಪ್ರತಿಯನ್ನು ನಾನು ಪಡೆದ ಬಗ್ಗೆ ಗೊತ್ತಿಲ್ಲ. ನಿಪಿಃ36 ರಲ್ಲಿನ ನಡಾವಳಿಯನ್ನು ನನ್ನ ಹೇಳಿಕೆಯ ಆಧಾರದ ಮೇಲೆ ಬರೆದಿರುತ್ತಾರೆ ಎಂದರೆ ಸರಿಯಲ್ಲ. ನಿಪಿಃ36 ಆದೇಶವನ್ನು ಸಹಾಯಕ ಆಯುಕ್ತರು ಬಳ್ಳಾರಿ ರವರು ಮಾಡಿರುತ್ತಾರೆ. ನಿಪಿಃ36 ಆದೇಶವನ್ನು ಸ್ಥಳ ಪರಿಶೀಲನೆ ಮಾಡದೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಪ್ರತಿವಾದಿಗಳು ನಮ್ಮ ಸ್ವಾಧೀನಕ್ಕೆ ತಕರಾರು ಮಾಡಿದ್ದಾರೆ ಎಂದು ನಾನು ವಾದ ಪತ್ರ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿಲ್ಲ. ದಾವಾ ಆಸ್ತಿಯಲ್ಲಿ ನಾನು ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಪಹಣಿ ಪತ್ರಿಕೆಗಳಲ್ಲಿ ನಮ್ಮ ಹೆಸರು ಇರುವ ಕಾರಣ ನಾನು ದಾವಾ ಆಸ್ತಿಯ ಸ್ವಾಧೀನದಲ್ಲಿರುತ್ತೇನೆಂದು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ

This is a True Copy of the Court Records Online. Authenticated @ districts.ecourtsindia.com/cnr/KABI700055262022/truecopy/order-2.pdf

**ಪಿ.ಡಬ್ಲ್ಯೂ: 1**

ಆಸ್ತಿಯಲ್ಲಿನ ನನ್ನ ಸ್ವಾಧೀನತೆ ತೋರಿಸಲು ನಾನು ಭಾವ ಚಿತ್ರಗಳನ್ನು ಹಾಜರು ಪಡಿಸಿಲ್ಲ. ಪ್ರತಿವಾದಿಗಳನ್ನು ದಾವಾ ಆಸ್ತಿಯ ಸ್ವಾಧೀನದಿಂದ ಹೊರಹಾಕಬೇಕೆಂಬ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ವಾದಿ ಪರ ವಕೀಲರು ಸಮಯಾವಕಾಶ ಕೇಳಿದ್ದರಿಂದ ಸಮಯಾವಕಾಶ ನೀಡಲಾಯಿತು.)**

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಮ್.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ**

This is a True Copy of the Court Records Online. Authenticated @ districts.ecourtsindia.com/cnr/KABI700055262022/truecopy/order-2.pdf